ಶ್ರೀ ಜಿ ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯಿಂದ ಬಂದಿರುವ ಗೌಜನ ಮಾನ್ಯ ಸದಸ್ಯರುಗಳು ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಗಮನಸೆಳೆಯುವ ಸೂಚನೆ ಮೂಲಕ ನಾಳೆ ಇದನ್ನು ಚರ್ಚೆಗೆ ತೆಗೆದುಕೊಳ್ಳಲು ತಾವು ಒಪ್ಪಿದ್ದೀರಿ. ಆದ್ದರಿಂದ ನಾಳೆ ಇದರ ಬಗ್ಗೆ ಸವಿಸ್ತಾರವಾಗಿ ವಿಚಾರ ಮಾಡಬಹುದು. ಈಗಲೆ ಕಡತಾ ಸೂರರಷ್ಟು ಲೆವಿ ಕೊಟ್ಟರೂ ಸಹ ಅಧಿಕಾರಿಗಳಿಂದ ಕಿರುಕುಳ ನಡೆಯುತ್ತಿದೆ ಎಂದು ಡಾಕ್ಟರ್ ಆಚಾರ್ ಅವರು ಹೇಳಿದರು. ಇದನ್ನು ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇವೆ.

ಇನ್ನು ಎರಡನೆಯದಾಗಿ ಬೆಂಗಳೂರಿನ ಶಾಸಕರು ಸೀಮೆ ಎಣ್ಣೆ ಬಗ್ಗೆ ಪ್ರಸ್ತೆ ಎತ್ತಿ ವಿತರಣೆ ಸರಿಯಾಗಿ ಆಗುತ್ತಿಲ್ಲವೆಂದು ಹೇಳಿದರು. ಈಗ ನಮಗೆ ೩೦ ಸಾವಿರ ಟನ್ ಸೀಮೆ ಎಣ್ಣೆ ಬೇಕಾಗುತ್ತದೆ. ಆದರೆ ಕೇಂದ್ರದವರು ನಮಗೆ ಕೊಡುತ್ತಿರುವುದು ೨೩ ಸಾವಿರ ಟನ್‌ಗಳು ಮಾತ್ರ. ಇದನ್ನು ಹೆಚ್ಚು ಮಾಡಬೇಕೆಂದು ನಾವು ಕೇಂದ್ರದ ಸಂಬಂಧಪಟ್ಟ ಮಂತ್ರಿಗಳ ಜೊತೆ ವ್ಯವಹಾರ ಮಾಡಿದ್ದೇವೆ. ಆದ್ದರಿಂದ ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಯುತ್ತದೆ. ಇಲ್ಲಿಯವರೆಗೆ ದ್ವಿಮುಖವಿಲೆ ಇದ್ದ ಕಾರಣದಿಂದ ಈ ಸಮಸ್ಯೆ ಉಂಟಾಗಿತ್ತು. ಆದರೆ ಈಗ ಇದನ್ನು ತೆಗೆದ ಕಾರಣ ಮುಂದೆ ಇಂತಹ ಪರಿಸ್ಥಿತಿ ಉಂಟಾಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್. — ಈಗ ಹಳ್ಳಿಗಳ ಕಡೆ ಒಂದು ಬಾಟಲ್ ಸೀಮೆ ಎಣ್ಣೆಗೆ ೩-೪ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ ಇದನ್ನು ಕಂಟ್ರೋಲ್ ಮಾಡಲು ಯಾರೂ ದಿಕ್ಕಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.—ಬೇರೆ ದಿವಸ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮೂಲಕ ಇದನ್ನು ಚರ್ಚೆ ಮಾಡೋಣ.

ಶ್ರೀ ವಿ. ಎಸ್. ಆಚಾರ್ಯ. — ಇದನ್ನು ಕೂಡಲೇ ನಿಯಮದ ಪ್ರಕಾರ ಚರ್ಚೆಗೆ ಇಟ್ಟುಕೊಳ್ಳಬಹುದು.

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ನಮ್ಮ ಕಡೆಯೂ ಇಂತಹ ಸಮಸ್ಯೆಗಳು ಇರುವುದರಿಂದ ತಾವು ವಿವರವಾದಂಥ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಒಬ್ಬರು ಮಾನ್ಯ ಸದಸ್ಯರು.—ನಮ್ಮ ಕಡೆಯೂ ಅಧಿಕಾರಿಗಳು ಲೆವಿ ಕೊಟ್ಟಿಲ್ಲವೆಂದು ೧೦-೧೫ ಲಿಲ್‌ಗಳನ್ನು ಸೀಜ್ ಮಾಡಿದ್ದಾರೆ ಇದರಿಂದ ಬೆಂಗಳೂರಿಗೆ ಅಕ್ಕಿ ಬರುವುದು ನಿಂತಿದೆ. ಸರ್ಕಾರದವರು ಅಧಿಕಾರಿಗಳು ಕೊಡುತ್ತಿರುವ ಕಿರುಕುಳವನ್ನು ಮೊದಲು ತಪ್ಪಿಸಬೇಕು.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮೂಲಕ ಇದನ್ನು ತೆಗೆದುಕೊಂಡು ಇಲ್ಲಿ ಚರ್ಚೆ ಮಾಡೋಣ.

(v) ಕಾರ್ಲ್ ಮಾರ್ಕ್ಸ್‌ಗೆ ಗೌರವ ಸೂಚಿಸುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಮತ್ತು ಶ್ರೀ ಸೂರ್ಯನಾರಾಯಣರಾವ್ ಅವರು ನಿಯಮ ೩೫೨ ಪ್ರಕಾರ ಒಂದು ಮುಖ್ಯ ವಿಷಯದ ಮೇಲೆ ನೋಟಿಸ್ ಕೊಟ್ಟಿದ್ದೇವೆ. ಕಾರ್ಲ್‌ಮಾರ್ಕ್ಸ್‌ಗೆ ಗೌರವ ಸೂಚಿಸಬೇಕೆಂದು ನಾವು ನೋಟೀಸ್‌ನಲ್ಲಿ ಕೇಳಿದ್ದೇವೆ. ಅವರು ಸತ್ತು ಮಾರ್ಚಿ ೧೪ನೇ ತಾರೀಖಿಗೆ ನೂರು ವರ್ಷಗಳಾಯಿತು. ಪ್ರಪಂಚದ ಎಲ್ಲ ಕಡೆಯೂ ಇವರ ಬಗ್ಗೆ ನೂರು ವರ್ಷಗಳ ಒಂದು ಪುಣ್ಯತಿಥಿಯನ್ನು ಆಚರಿಸಲಾಗುತ್ತಿದೆ. ಅವನು ಅತ್ಯಂತ ಮೇಧಾವಿ ಮತ್ತು ತತ್ವಜ್ಞಾನಿ ಆಗಿದ್ದರು. ಇವರ ಒಂದು ತತ್ವಗಳನ್ನು ಕೋಟ್ಯಾಂತರ ಜನರು ಪ್ರಪಂಚದ ಎಲ್ಲ ಕಡೆಯೂ ಸ್ಫೂರ್ತಿಗೊಂಡು ಅವರವರ ಪರಿಸ್ಥಿತಿಗೆ ಅನುಗುಣವಾಗಿ ಜಾರಿಗೆ ತರಲು ಹೊರಟಿದ್ದಾರೆ. ಅದರಲ್ಲಿ ಕೆಲವರು ಸಫಲರೂ ಆಗಿದ್ದಾರೆ ಇವನ ಒಂದು ಮೂಲಭೂತ ತತ್ವವೆಂದರೆ ಬಂಡವಾಳಗಾರರನ್ನು ಮತ್ತು ಕಾರ್ಮಿಕರು, ಭೂಮಾಲೀಕರು ಮತ್ತು ರೈತಕಾರ್ಮಿಕರು ಎಂಬತ್ತಂಥ ವರ್ಗಗಳು ಇರಬಾರದು, ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡಬೇಕೆಂಬುದನ್ನು ಇವನು ರೂಪಿಸಿದರು. ಇವರ ಒಂದು ತತ್ವಗಳನ್ನು ಇವರ ಸ್ನೇಹಿತರಾದಂಥ ಫೆಡರಿಕ್ ಎಂದಲ ಕೂಡ ಪ್ರಚಾರ ಮಾಡಿದ್ದರ ಮೇರೆಗೆ ಇವೊತ್ತು

ಪ್ರಪಂಚದ ಮೂರನೇ ಒಂದು ಭಾಗದಲ್ಲಿ ಇವರ ತತ್ವಗಳನ್ನು ಜಾರಿಯಲ್ಲಿ ತರಲಾಗಿದೆ. ಈ ತತ್ವಗಳ ಆಧಾರದ ಮೇಲೆ ಸರ್ಕಾರಗಳು ನಡೆಯುತ್ತಿವೆ. ಇನ್ನುಳಿದ ಮೂರನೇ ಎರಡು ಭಾಗಗಳಲ್ಲಿ ಕೂಡ ಈ ತತ್ವಗಳ ಒಂದು ಪ್ರಭಾವ ಬೀರುವಾಗಿ ಸಾಗಿದೆ. ಕ್ಯೂಬಾ, ರಷ್ಯಾ, ಚೈನಾ, ವಿಯೆಟ್ನಾಮ್ ಇಲ್ಲೆಲ್ಲಾ ಇವರ ಒಂದು ತತ್ವಗಳನ್ನೇ ಜಾರಿಗೆ ತರಲಾಗಿದೆ, ಆದ್ದರಿಂದ...

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆಗಳ ನಂತರ ತಮ್ಮದನ್ನು ಕನ್ಸಡರ್ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಆಗಬಹುದು.

(v) ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ಬಗ್ಗೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಕಳೆದ ೩-೪ ದಿವಸಗಳಿಂದ ಮಹಾರಾಷ್ಟ್ರದಲ್ಲಿರುವಂತಹ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆಂದು ವರದಿಯಾಗಿದೆ. ಇದೇ ಕಾರಣಕ್ಕಾಗಿ ನಮ್ಮಲ್ಲಿರುವ ಕೆಲವು ಪತ್ರಿಕಾರ್ತರು ಹಾಗೂ ಬರವಣಿಗೆಗಾರರು ಧರಣಿ ಸಹ ನಡೆಸಿದರು. ಈ ವಿಚಾರ ನಿನ್ನೆ ಕೂಡ ಪತ್ರಿಕೆಗಳಲ್ಲಿ ಬಂದಿದೆ ಇದರಿಂದ ಅಲ್ಲಿರುವಂತಹ ನಮ್ಮ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಅದೇ ನಮ್ಮ ರಾಜ್ಯದಲ್ಲಿರುವ ಮಹಾರಾಷ್ಟ್ರದ ಜನರಿಗೆ ನಮ್ಮ ಸರ್ಕಾರ ಎಲ್ಲ ರೀತಿಯ ಶಾಲೆಗಳ ಅನುಕೂಲವನ್ನು ಕಲ್ಪಿಸಿಕೊಟ್ಟಿದೆ. ಆದರೆ ಅಲ್ಲಿ ನಮ್ಮ ಕನ್ನಡಿಗರಿಗೆ ಅಲ್ಲಿನ ಸರ್ಕಾರದವರು ತೊಂದರೆ ಕೊಡುವುದಾದರೆ ಮತ್ತು ಅಲ್ಲಿನ ಕನ್ನಡ ಶಾಲೆಗಳನ್ನು ನಿಲ್ಲಿಸುವುದಾದರೆ ಅದು ದೊಡ್ಡ ಅಪರಾಧವಾಗುತ್ತದೆ. ಇದನ್ನು ನಮ್ಮ ಸರ್ಕಾರ ತೀವ್ರವಾಗಿ ಪರಿಗಣಿಸಿ ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಈಗ ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಈ ಬಗ್ಗೆ ಈ ಮಾನ್ಯ ಸಭೆಗೆ ತಿಳಿವಳಿಕೆ ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—೧೯೭೯ನೇ ಇಸವಿಯಲ್ಲಿ ಮಹಾರಾಷ್ಟ್ರ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿದೆ. ಬಹಳ ಬುದ್ಧಿವಂಚಿಕೆಯಿಂದ ಸುತ್ತೋಲೆಯನ್ನು ಹೊರಡಿಸಿ ಪ್ರೈವೇಟ್‌ನವರು ಸ್ಕೂಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದಾರೆ. ಈ ಸುತ್ತೋಲೆಯಿಂದ ಕನ್ನಡ ಶಾಲೆಗಳೆಲ್ಲಾ ಬಂದ್ ಆಯಿತು. ಮರಾಠಿ ಶಾಲೆಗಳನ್ನು ಸರ್ಕಾರವು ಕೊಡುತ್ತಿದ್ದಾರೆ. ೨೦ ವರ್ಷಗಳಿಂದ ಇದ್ದಂತಹ ಕನ್ನಡ ಶಾಲೆಗಳನ್ನು ಕ್ಲೋಸ್ ಮಾಡಿದ್ದಾರೆ. ಈ ಪ್ರಕಾರ ಆದೇಶವನ್ನು ಎಲ್ಲರಿಗೂ ಕೊಟ್ಟಿದ್ದಾರೆ. ಇದರಿಂದ ಅಲ್ಲಿ ಕನ್ನಡಕ್ಕೆ ಭಾರಿ ಹೊಡೆತ ಬಿದ್ದಿದೆ. ಮೈನಾರಿಟಿ ಕಮಿಷನ್ ಕೂಡ ಈ ಬಗ್ಗೆ ವರದಿಯನ್ನು ಕೊಟ್ಟು ಮಹಾರಾಷ್ಟ್ರದಲ್ಲಿ ಕನ್ನಡಕ್ಕೆ ಸಂಪೂರ್ಣ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮರಾಠಿ ಮತ್ತು ಉರ್ದು ಭಾಷೆಗಳಿಗೆ ಎಲ್ಲಾ ಸೌಲಭ್ಯಗಳೂ ದೊರೆಯುತ್ತಿವೆ. ಇದರ ಬಗ್ಗೆ ಈ ಸಭೆಯಲ್ಲಿ ಹಿಂದೆ ಚರ್ಚೆಯಾಯಿತು. ಹಿಂದೆ ಇದ್ದ ಮಾನ್ಯ ಗುಂಡೂರಾಯರು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದರೂ ಏನೂ ಆಗಲಿಲ್ಲ. ಈ ವಿಷಯವನ್ನು ಇಂದಿರಾ ಗಾಂಧಿಯವರು ನೋಟೀಸ್‌ಗೆ ತಂದು ಅನ್ನ ಸತ್ಯಾಗ್ರಹ ಮಾಡಲಾಗಿದೆ. ಆ ವಿಷಯವನ್ನು ತಮ್ಮ ಮುಂದೆ ತರುತ್ತಿದ್ದೇನೆ, ದಯವಾಡಿ ಇದರ ಬಗ್ಗೆ ಏನು ಮಾಡುತ್ತೀರಿ ಅನ್ನುವುದನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಉಪಾಧ್ಯಕ್ಷರೇ ಇದಕ್ಕೆ ನಾನು ಉತ್ತರ ಕೊಡುತ್ತೇನೆ. ಈ ವಿಷಯವನ್ನು ಇವತ್ತೇ ಹೇಳಿ, ಇದೇ ಸಂದರ್ಭದಲ್ಲಿ ಇವತ್ತೇ ಉತ್ತರ ನಿರೀಕ್ಷಿಸಿದರೆ ಅದಕ್ಕೆ ನೀವು ಪರವಾನಿಗೆ ಕೊಡುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದೆ. ಇಲ್ಲದಿದ್ದರೆ ಈಗಲೇ ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಾರಾಷ್ಟ್ರದಲ್ಲಿರತಕ್ಕ ಕನ್ನಡಿಗರ ಕಷ್ಟದ ಬಗ್ಗೆ ಅವರು ಬಾಯಿ ಮುಖಾಂತರ ಕೇಳಿದ್ದೇನೆ ನಾನು ಸೋಲ್ಲಾಪುರಕ್ಕೆ ಹೋಗಿ ನಾಲ್ಕೈದು ತಿಂಗಳ ಹಿಂದೆ ಕನ್ನಡಿಗರನ್ನು ಭೇಟಿಯಾಗಿದ್ದೇನೆ. ದಿಲ್ಲಿಯಲ್ಲಿ ಸಿದ್ದನಾಥ ಬಳ್ಳಾರಿ ಮತ್ತು ಹುಬ್ಬಳಿಕರ್ ಅವರನ್ನು ಭೇಟಿಯಾಗಿದ್ದೇನೆ, ಅವರ ಜೊತೆಯಲ್ಲಿ ಕಂಳಿತಿದ್ದೇನೆ. ಮೊನ್ನೆ ಇಲ್ಲಿಗೆ ಅವರು ಬಂದಾಗ ಕೂಡ ನಾನು ಮಾತನಾಡಿದ್ದೇನೆ, ಕನ್ನಡಿಗರ ಅನುಕೂಲತೆಯ ಬಗ್ಗೆ ಏನು ಕಷ್ಟವಿದೆ ಎಂಬ ಬಗ್ಗೆ ನಾನು ಮಾಹಿತಿ ಸಂಗ್ರಹ ಮಾಡುತ್ತಿದ್ದೇನೆ. ಕರ್ನಾಟಕದಲ್ಲಿ ಮರಾಠಿಗರ ಮಕ್ಕಳಿಗೆ ನಾವು ಏನೇನು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದೇವೆಯೋ ಅಷ್ಟಾದರೂ ಕೊಡಬೇಕು ಅನ್ನತಕ್ಕದ್ದು ನಾವು ನಿರೀಕ್ಷೆ ಮಾಡೋಣ. ಸಂವಿಧಾನದ ಪ್ರಕಾರ ಕೊಡತಕ್ಕದ್ದು ನಾವು ಮಹಾರಾಷ್ಟ್ರ ಸರ್ಕಾರದ ಕರ್ತವ್ಯವೂ ಹೌದು. ಮಾಹಿತಿ ಸಂಗ್ರಹ ಆಗುವವರೆಗೆ ಮುಂದಿನ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸು

ಪುದಿಲ್ಲ. ಆದಕ್ಕೆ ಸ್ವಲ್ಪ ಸಮಯ ಆಗಬಹುದು. ಇದೇ ಸಂದರ್ಭದಲ್ಲಿ ಮತ್ತೊಂದು ಮಾತು ಹೇಳಂ ಪುದಕ್ಕೆ ಬಯಸುತ್ತೇನೆ. ಸರ್ಕಾರ ಈ ವಿಚಾರದಲ್ಲಿ ಒಂದು ಸಣ್ಣ ಸಮಿತಿಯನ್ನು ನೇಮಕ ಮಾಡ ಬೇಕೆಂದು ಇದೆ. ಆದರ ಉದ್ದೇಶ ಏರಡೂ ಕಡೆಗೆ ಯೂಪ ರೀತಿಯು ತಾರತಮ್ಯ ಆಗುತ್ತಿದೆ ಎನ್ನು ವುದನ್ನು ತಿಳಿದುಕೊಳ್ಳುವುದು ಬೌರ್ಡರ್ ವಿಚಾರದಲ್ಲಿ ಪುನಃ ಮಾತುಕತೆ ನಡೆಯುವ ಸಂಭವವಿರುವುದ ರಿಂದ, ಆದರ ಬಗ್ಗೆಯೂ ಕೂಡ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ.

SRI S. BHEEMANNA KHANDRE.—I protest against the discussion. ಮಯಾರಾಪ್ಪ ಗಡಿ ಪ್ರಶ್ನೆಯ ಬಗ್ಗೆ ಮತ್ತೆ ಏನು ಚರ್ಚೆ ಮಾಡುತ್ತೀರಿ? ಅದರ ಬಗ್ಗೆ ನಾನು ಪ್ರೊಟೆಸ್ಟ್ ಮಾಡುತ್ತಿದ್ದೇನೆ. ಪುನಃ ಅದರ ಬಗ್ಗೆ ಮಾತುಕತೆ ನಡೆಯುವುದು ಬೇಕಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಆ ಒಂದು ಸೂಚನೆಯನ್ನು ನಾನು ಸರ್ವಥಾ ಒಪ್ಪುವುದಿಲ್ಲ. ಮಯಾರಾಪ್ಪನವರ ಬಗ್ಗೆ ಮಾತನಾಡಿ ಎಂದು ಹೇಳಿದರು, ಈಗ ಮಾತನಾಡಬೇಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಗಡಿ ಪ್ರಶ್ನೆ ಬಗ್ಗೆ ಇನ್ನೆಲ್ಲಿಯವರೆಗೆ ಮಾತನಾಡುತ್ತೀರಿ? ಅದರ ಬಗ್ಗೆ ಮಾತನಾಡುವುದೇ ಬೇಡ.

ಉಪಾಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾತುಕತೆ ನಡೆದ ಮಹಾಜನ್ ವರದಿಯ ಶಿಫಾರಸ್ಸಿನ ಚೌಕಟ್ಟಿ ನೊಳಗಡೆ ನಾವು ಒಂದು ತೀರ್ಮಾನಕ್ಕೆ ಬರುವುದಾದರೆ ಅದರಲ್ಲಿ ಏನು ತಪ್ಪು?

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಅಸೆಂಬ್ಲಿಯೊಳಗೆ ಚರ್ಚೆಯಾಗಿ ವಿಷಯ ಪಾಸ್ ಆದನಂತರ ಅದನ್ನು ಚೇಂಜ್ ಮಾಡಲಿಕ್ಕೆ ಮುಖ್ಯಮಂತ್ರಿಗಳಿಗೆ ಅಧಿಕಾರವಿಲ್ಲ. Without the permission of the Assembly, the discussion cannot go on.

ಉಪಾಧ್ಯಕ್ಷರು.—ಮಾನ್ಯ ಖಂಡ್ರೆಯವರೇ ತಾವು ಮಾತನಾಡಬೇಡಿ. ರೆಕಾರ್ಡ್ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರ ಆ ರೀತಿ ನಿಲುವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಅದು ಯೋಗ್ಯವೂ ಅನಿಸುವುದಿಲ್ಲ. ಬೇರೆಯವರು ಈ ಬಗ್ಗೆ ಮಾತುಕತೆ ಆಡುವುದು ತಪ್ಪು ಅನ್ನುವುದು ಸರಿಯಲ್ಲ.

ಉಪಾಧ್ಯಕ್ಷರು.—ಈಗ ಬೇರೆ ವಿಚಾರ ತೆಗೆದುಕೊಳ್ಳೋಣ. ಗಮನ ಸೆಳೆಯುವ ವಿಚಾರ ತೆಗೆದು ಕೊಳ್ಳೋಣ.

ಶ್ರೀ ಪಂಪಾಪತಿ.—ಹೊಸ ನಿಯಮದ ಪ್ರಕಾರ ಮಾರಾಟ ತೆರಿಗೆ ವಿಧಿಸಿರುವುದರಿಂದ ದಾವಣಗೆರೆ ಯಲ್ಲಿ ಬಂದ್ ಮಾಡಿದ್ದಾರೆ...

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಕೆಲವರು ಗಂಟೆಗಟ್ಟಲೆ ಮಾತನಾಡುತ್ತಾರೆ ಅವರಿಗೆ ಅವಕಾಶ ಕೊಡುತ್ತೀರಿ. ನಾವು ಒಂದು ಸಣ್ಣ ವಿಷಯ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಮಾರಾಟ ತೆರಿಗೆಯನ್ನು ವಿಧಿಸಿರುವ ಅಧಿಕಾರಿಗಳ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ವರ್ತಕರಿಗೆ ಆಗುವ ತೊಂದರೆಯನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಉತ್ತರ ಹೇಳಲೇಬೇಕು. ಅದರ ದೊಡ್ಡ ಗಲಾಟೆಯಾಗುವುದು ಇದೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಉಪಾಧ್ಯಕ್ಷರು ಇತಕ್ಕೆ ಈ ರೀತಿಯು ಮುಲತಾಯಿ ಧೋರಣೆ ತೋರಿಸುತ್ತೀರಿ? ನಾವು ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು.—ಮಲತಾಯಿ ಧೋರಣೆಯನ್ನು ನಾನು ಯಾರಿಗೂ ತೋರುವುಲ್ಲ. ನನಗೆ ಎಲ್ಲಾ ಸದಸ್ಯರು ಒಂದೇ.

ಶ್ರೀ ಪಂಪಾಪತಿ.—ಇವತ್ತು ದಾವಣಗೆರೆಯಲ್ಲಿ ಬಂದ್ ಮಾಡಿ ತಮ್ಮ ಪ್ರತಿಭಟನೆ ವ್ಯಕ್ತ ಪಡಿಸುತ್ತಿದ್ದಾರೆ. ಅಲ್ಲಿ ಕಿರುಕುಳ ಮುಂದುವರಿದಿದೆ, ದಾವಣಗೆರೆಯಲ್ಲಿ ಪರಿಸ್ಥಿತಿ ಹದಗೆಡುತ್ತಿದೆ. ಕಾನೂನು ಸುವ್ಯವಸ್ಥೆ ಭಂಗಗೊಳ್ಳುತ್ತಿದೆ. ಇದಕ್ಕೆ ಕಾರಣವಾದ ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತಿನ ಕ್ರಮ ಕೈಗೊಂಡು ಆಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಮುಖ್ಯ ಮಂತ್ರಿಗಳು ಭರವಸೆಯನ್ನು ಕೊಡಬೇಕು.

ಉಪಾಧ್ಯಕ್ಷರು.—ತಾವು ನೋಟೀಸ್ ಕೊಡಿ. Please give a notice. I will allow you to speak. ತಾವು ಹಿರಿಯ ಸದಸ್ಯರು ಇದ್ದೀರಿ, ತಮಗೆ ಕಾನೂನು ರೀತಿ ನೀತಿ ಗೊತ್ತು. ತಾವು ಹೀಗೆ ಮಾಡಿದರೆ ಹೇಗೆ ?

ಶ್ರೀ ಪಂಪಾಪತಿ.—ಮುಂಜಿತವಾಗಿ ನಾನು ತಿಳಿಸುತ್ತಿದ್ದೇನೆ. ಇವತ್ತು ದಾವಣಗೆರೆಯಲ್ಲಿ ಬಂದ್ ಆಗಿದೆ.

ಉಪಾಧ್ಯಕ್ಷರು.—ತಾವು ನೋಟೀಸ್ ಕೊಟ್ಟು ಮಾತನಾಡಬೇಕು. ಸದನದ ಸಮಯವನ್ನು ಕಳೆಯಬೇಡಿ. ತಾವು ನೋಟೀಸ್ ಕೊಟ್ಟರೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

೧–೩೦ ಪಿ ಎಂ.

ಗಮನ ಸೆಳೆಯುವ ಸೂಚನೆ

(i) ಬೆಂಗಳೂರಿನ ರಾಮಯ್ಯ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ದಿನಾಂಕ ೧೭ನೇ ಮಾರ್ಚ್ ೧೯೮೩ ರ ರಾತ್ರಿ ಆರಿತಗಾಯದಿಂದಾಗಿ ವೈದ್ಯಕೀಯ ವಿದ್ಯಾರ್ಥಿಯೊಬ್ಬರು ಮೃತ ಪಟ್ಟಿರುವ ವಿಚಾರದ ಬಗ್ಗೆ:—

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ನನ್ನ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುವ ಮೊದಲು ನಾನು ಎರಡು ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮುನ್ನ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಮೊದಲೇ ಅವರ ಗಮನಕ್ಕೆ ಈ ವಿಚಾರವನ್ನು ತರೋಣ ವೆಂದು ಪ್ರಯತ್ನ ಮಾಡಿದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ನಾನು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) ನಾನು ಈ ಕೆಳಗೆ ಕಂಡ ವಿಸ್ತರಣೆಯನ್ನು ಮಾಡುತ್ತೇನೆ.

೧೭–೩–೮೩ ರಂದು ರಾತ್ರಿ ಸುಮಾರು ೧೦ ಗಂಟೆಗೆ ಎಂ ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ತಮ್ಮೊಳಗೆ ಪರಸ್ಪರ ವಾದವಿವಾದ ನಡೆಸಿದರೆಂದು ಮತ್ತು ಅದರ ಲ್ಲೊಬ್ಬ ಇನ್ನೊಬ್ಬನಿಗೆ, ಅಂದೇ ಕಾಲೇಜಿನ ಮಹಿಳಾ ವಿದ್ಯಾರ್ಥಿಗೆ ಛೇಡಿಸಿದ ಬಗ್ಗೆ ಎಚ್ಚರಿಕೆ ನೀಡಿದ ನೆಂದು ವರದಿಯಾಗಿದೆ. ಈ ಜಗಳವು ಬೆಳೆದು ಎರಡು ಗುಂಪುಗಳ ನಡುವೆ ಹೊಡೆದಾಟಕ್ಕೆ ಕಾರಣ ವಾಯಿತು ಎಂದು ಕಂಡು ಬರುತ್ತದೆ. ಗಾಯಗೊಂಡ ಕೆಲವು ವಿದ್ಯಾರ್ಥಿಗಳಿಗೆ ಮಲ್ಲೇಶ್ವರದ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಆವರಲ್ಲಿ ಯಾರೂ ಈ ಬಗ್ಗೆ ಪೋಲೀಸರಿಗೆ ದೂರು ನೀಡಿಲ್ಲ.

೨. ಆದರೂ, ಆನಂತರ ರಾತ್ರಿಯಲ್ಲಿ ಈ ಎರಡೂ ಗುಂಪುಗಳವರು ರಾಜಿ ಮಾತುಕತೆಗಳಿಗಾಗಿ ಭೇಟಿಯಾದರು. ಈ ಮಾತುಕತೆಗಳ ಕಾಲದಲ್ಲಿ ಅವರುಗಳಿಗೆ ಭಿನ್ನಾಭಿಪ್ರಾಯ ಉಂಟಾಗಿ ಯೂಸುಫ್ ಎಂಬ ಹೆಸರಿನ ವಿದ್ಯಾರ್ಥಿ ರಿಸ್ವಾನ್ ಮುನಾಫ್ ಮತ್ತು ವಂಹೇಂದ್ರಕುಮಾರ್ ಎಂಬ ಇಬ್ಬರು ವಿದ್ಯಾರ್ಥಿಗಳಿಗೆ ಇರಿದನೆಂದು ಆಪಾದಿಸಲಾಗಿದೆ. ಆ ಇಬ್ಬರು ವಿದ್ಯಾರ್ಥಿಗಳನ್ನು ಮಲ್ಲೇಶ್ವರದ ಕೆ. ಸಿ. ಜನರಲ್ ಆಸ್ಪತ್ರೆಗೆ ಕಳಿಸಲಾಗಿದ್ದು ಮುನಾಫ್ ಎಂಬುವನು ಗಾಯಗಳಿಂದಾಗಿ ಸತ್ತುಹೋದ